**All India Radio: Bangalore**
**National Bulletin In Kannada**
**19.05.2026  13.10 hrs**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**19.05.2026  13.10 hrs**

**<>><><*><><<>**

ಮುಖ್ಯಾಂಶಗಳು

**೧. ಓಸ್ಲೋದ ೩ನೇ ಭಾರತ-ನಾರ್ಡಿಕ್ ಶೃಂಗಸಭೆಯಲ್ಲಿ ಇಂದು ಪ್ರಧಾನಿ ನರೇಂದ್ರ ಮೋದಿ ಭಾಗಿ ವ್ಯಾಪಾರ, ಹೂಡಿಕೆ ಸೇರಿ ಹಲವು ಕ್ಷೇತ್ರಗಳ ಕುರಿತು ಚರ್ಚೆ**

**೨. ಸಚಿವ ರಾಜನಾಥ್ ಸಿಂಗ್- ವಿಯೆಟ್ನಾಂ ಅಧ್ಯಕ್ಷರ ಭೇಟಿ; ಉಭಯ ದೇಶಗಳ ರಕ್ಷಣ ಸಹಕಾರ ಬಲವರ್ಧನೆಗೆ ಭಾರತ ಪುನರುಚ್ಚಾರ**

**೩. ಪ್ರತಿ ಲೀಟರ್ ಪೆಟ್ರೋಲ್, ಡೀಸೆಲ್ ದರದಲ್ಲಿ ಮತ್ತೆ ೯೦ ಪೈಸೆ ಏರಿಕೆ, ಒಂದೇ ವಾರದಲ್ಲಿ ಇಂಧನ ಇನ್ನಷ್ಟು ತುಟ್ಟಿ**

**೪. ಐಪಿಎಲ್ ಟಿ-೨೦ ಕ್ರಿಕೆಟ್: ಜೈಪುರದಲ್ಲಿ ಇಂದು ರಾಜಸ್ಥಾನ ರಾಯಲ್ಸ್ - ಲಖನೌ ಸೂಪರ್ ಜಯಂಟ್ಸ್ ತಂಡಗಳು ಸೆಣಸು**

**<>><><*><><<>**

ನಾರ್ವೆಗೆ ಭೇಟಿ ನೀಡಿದ ಎರಡನೇ ದಿನದಂದು, ಪ್ರಧಾನಿ ಮೋದಿ ಅವರು ೫ ನಾರ್ಡಿಕ್ ರಾಷ್ಟ್ರಗಳ ತಮ್ಮ ಸಹವರ್ತಿಗಳೊಂದಿಗೆ ಇಂದು ಓಸ್ಲೋದಲ್ಲಿ ನಡೆಯಲಿರುವ ೩ನೇ ಭಾರತ-ನಾರ್ಡಿಕ್ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ೨೦೨೨ ರಲ್ಲಿ ಡೆನ್ಮಾರ್ಕ್ ನ ಕೋಪನ್ ಹ್ಯಾಗನ್ ನಲ್ಲಿ ನಡೆದ ಹಿಂದಿನ ಶೃಂಗಸಭೆಯ ನಂತರ ಭಾರತ ಮತ್ತು ನಾರ್ಡಿಕ್ ದೇಶಗಳ ನಡುವೆ ಹೆಚ್ಚಿದ ವಲಯ ಸಹಕಾರವನ್ನು ಶೃಂಗಸಭೆಯು ನಿರ್ಮಿಸುತ್ತದೆ. ಟಿಇಪಿಎ ಜಾರಿಯಲ್ಲಿರುವುದರಿಂದ, ಶೃಂಗಸಭೆಯು ಆಳವಾದ ವ್ಯಾಪಾರ ಮತ್ತು ಹೂಡಿಕೆ ಸಂಪರ್ಕಗಳನ್ನು ರೂಪಿಸಲು ಪ್ರಯತ್ನಿಸುತ್ತದೆ. ಈ ಬ್ಲಾಕ್ ನೊಂದಿಗಿನ ಭಾರತದ ದ್ವಿಪಕ್ಷೀಯ ವ್ಯಾಪಾರವು ಪ್ರಸ್ತುತ ೧೯ ಬಿಲಿಯನ್ ಡಾಲರ್ ಆಗಿದೆ. ಮೂರನೇ ಭಾರತ-ನಾರ್ಡಿಕ್ ಶೃಂಗಸಭೆಯ ನೇಪಥ್ಯದಲ್ಲಿ ಡೆನ್ಮಾರ್ಕ್, ಐಸ್ ಲ್ಯಾಂಡ್ ಮತ್ತು ಫಿನ್ಲೆಂ ಡ್ ಪ್ರಧಾನಮಂತ್ರಿಗಳೊಂದಿಗೆ ಪ್ರಧಾನಿ ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ. ಈ ನಡುವೆ, ತಮ್ಮ ಐದು ರಾಷ್ಟ್ರಗಳ ಭೇಟಿಯ ಕೊನೆಯ ಹಂತದಲ್ಲಿ, ನರೇಂದ್ರ ಮೋದಿ ಅವರು ಇಟಲಿಯ ಸಹವರ್ತಿ ಜಾರ್ಜಿಯಾ ಮೆಲೋನಿ ಅವರ ಆಹ್ವಾನದ ಮೇರೆಗೆ ಎರಡು ದಿನಗಳ ರಾಜ್ಯ ಭೇಟಿಗಾಗಿ ಇಂದು ಇಟಲಿಯ ರೋಮ್ ಗೆ ಆಗಮಿಸಲಿದ್ದಾರೆ. ಪ್ರಧಾನಿ ಮೆಲೋನಿ ಅವರೊಂದಿಗೆ ಪ್ರಧಾನಿ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಅವರು ಇಟಲಿಯ ಅಧ್ಯಕ್ಷ ಸೆರ್ಗಿಯೋ ಮಟ್ಟೆರೆಲ್ಲಾ ಅವರನ್ನೂ ಸಹ ಭೇಟಿ ಮಾಡಲಿದ್ದಾರೆ.

**<>><><*><><<>**

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ವಿಯೆಟ್ನಾಂ ಅಧ್ಯಕ್ಷ ಟೋ ಲಾಮ್ ಅವರನ್ನು ಭೇಟಿ ಮಾಡಿ ಉಭಯ ದೇಶಗಳ ನಡುವಿನ ರಕ್ಷಣಾ ಸಹಕಾರವನ್ನು ಮತ್ತಷ್ಟು ಗಾಢವಾಗಿಸುವ ಭಾರತದ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ. ಈ ಸಂಬಂಧ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರುವ ರಕ್ಷಣಾ ಸಚಿವರು, ಈ ಸಹಕಾರವು ಉಭಯ ದೇಶಗಳ ನಡುವಿನ ವರ್ಧಿತ ಸಮಗ್ರ ಕಾರ್ಯತಂತ್ರದ ಸಹಭಾಗಿತ್ವದ ಪ್ರಮುಖ ಆಧಾರಸ್ತಂಭವಾಗಿದೆ ಎಂದು ಹೇಳಿದ್ದಾರೆ. ಭಾರತ ಮತ್ತು ವಿಯೆಟ್ನಾಂ ಪರಸ್ಪರ ನಂಬಿಕೆ, ಹಂಚಿಕೆಯ ಮೌಲ್ಯಗಳು ಮತ್ತು ರಕ್ಷಣೆ, ಭದ್ರತೆ ಮತ್ತು ಪ್ರಾದೇಶಿಕ ಸ್ಥಿರತೆಯಲ್ಲಿ ನಿಕಟ ಸಹಕಾರದಲ್ಲಿ ಬೇರೂರಿರುವ ಬಲವಾದ ಬಂಧವನ್ನು ಹಂಚಿಕೊಂಡಿವೆ ಎಂದು ಅವರು ಹೇಳಿದ್ದಾರೆ. ಸಚಿವರು ಹನೋಯ್ ನಲ್ಲಿ ವಿಯೆಟ್ನಾಂ ರಕ್ಷಣಾ ಸಚಿವ ಜನರಲ್ ಫಾನ್ ವ್ಯಾನ್ ಜಿಯಾಂಗ್ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿದರು. ಬೆಳೆಯುತ್ತಿರುವ ಭಾರತ-ವಿಯೆಟ್ನಾಂ ರಕ್ಷಣಾ ಪಾಲುದಾರಿಕೆಯನ್ನು ಎರಡೂ ಕಡೆಯವರು ಪರಿಶೀಲಿಸಿದರು ಮತ್ತು ಕಡಲ ಭದ್ರತೆ, ರಕ್ಷಣಾ ಉದ್ಯಮ, ತರಬೇತಿ ಮತ್ತು ಪ್ರಾದೇಶಿಕ ಸ್ಥಿರತೆಯಲ್ಲಿ ಸಹಕಾರವನ್ನು ಮತ್ತಷ್ಟು ಗಾಢವಾಗಿಸುವ ಮಾರ್ಗಗಳ ಬಗ್ಗೆ ಚರ್ಚಿಸಿದ್ದಾರೆ.

<>><><*><><<>

ದೆಹಲಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ  ಸುಮಾರು ೯೦ ಪೈಸೆ ಹೆಚ್ಚಾಗಿದೆ. ಇಂಡಿಯನ್ ಆಯಿಲ್ ಪ್ರಕಾರ, ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಪೆಟ್ರೋಲ್ ಬೆಲೆ ಹಿಂದಿನ ೯೭.೭೭ ರಿಂದ ೯೮.೬೪ ರೂಪಾಯಿಗೆ ಏರಿಕೆಯಾಗಿದ್ದರೆ, ಡೀಸೆಲ್ ಬೆಲೆ ಪ್ರತಿ ಲೀಟರ್ ಗೆ  ೯೦.೬೭ ರಿಂದ ೯೧.೫೮ ರೂಪಾಯಿಗೆ ಏರಿದೆ. ಬೆಂಗಳೂರಿನಲ್ಲಿ ಪರಿಷ್ಕೃತ ಪೆಟ್ರೋಲ್ ದರ ೧೦೬.೧೭ ರಿಂದ ೧೦೭.೧೨ ರೂಪಾಯಿಗೆ ಏರಿಸಲಾಗಿದೆ. ಹಾಗೆಯೇ ಡೀಸೆಲ್ ದರ ೯೪.೧೦ ಯಿಂದ ೯೫.೦೪ ರೂಪಾಯಿಗೆ ಏರಿಸಲಾಗಿದೆ.

<>><><*><><<>

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಛತ್ತೀಸ್ ಗಢದ ಬಸ್ತಾರ್ ವಿಭಾಗೀಯ ಕೇಂದ್ರ ಕಚೇರಿ ಜಗದಾಲ್ಪುರದಲ್ಲಿ ಕೇಂದ್ರ ವಲಯ ಮಂಡಳಿಯ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಸಭೆಯಲ್ಲಿ ಛತ್ತೀಸ್ ಗಢ, ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ಉತ್ತರಾಖಂಡದ ಮುಖ್ಯಮಂತ್ರಿಗಳು ಮತ್ತು ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ. ನಿನ್ನೆ ಛತ್ತೀಸ್ ಗಢಕ್ಕೆ ಭೇಟಿ ನೀಡಿದ ಅಮಿತ್ ಶಾ ಅವರು ಬಸ್ತಾರ್ ಜಿಲ್ಲೆಯ ನೇತನಾರ್ ಗ್ರಾಮದಲ್ಲಿ ಸಾರ್ವಜನಿಕ ಸೇವಾ ಕೇಂದ್ರವನ್ನು ಉದ್ಘಾಟಿಸಿದರು.

<>><><*><><<>

ಕೇಂದ್ರ ಬಂದರು, ಹಡಗು ಮತ್ತು ಜಲಮಾರ್ಗಗಳ ಸಚಿವ ಸರ್ಬಾನಂದ ಸೋನವಾಲ್, ನವದೆಹಲಿಯಲ್ಲಿ ದೇಶದ ಬಹು ನಿರೀಕ್ಷಿತ ವಾಟರ್ ಮೆಟ್ರೋ ಸೇವೆಗಳ ಆರಂಭದ ಕುರಿತು ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು. ೧೮ ನಗರಗಳಲ್ಲಿ ವಾಟರ್ ಮೆಟ್ರೋ ಸೇವೆಗಳನ್ನು ಪ್ರಾರಂಭಿಸುವ ಯೋಜನೆಯನ್ನು ಕೇಂದ್ರವು ಮುಂದಿಟ್ಟಿದೆ, ಮೊದಲ ಹಂತಕ್ಕೆ ಗುವಾಹಟಿಯನ್ನು ಗುರುತಿಸಲಾಗಿದೆ ಎಂದು ಕೇಂದ್ರ ಸಚಿವರು ಹೇಳಿದರು. ಶ್ರೀನಗರ, ಪಾಟ್ನಾ, ವಾರಣಾಸಿ, ಅಯೋಧ್ಯೆ ಮತ್ತು ಪ್ರಯಾಗರಾಜ್ ಸೇರಿದಂತೆ ನಗರಗಳು ಸಹ ಮೊದಲ ಹಂತದ ಭಾಗವಾಗಿದ್ದರೆ, ಅಸ್ಸಾಂನ ತೇಜ್ಪುರ ಮತ್ತು ದಿಬ್ರುಗಢವನ್ನು ಯೋಜನೆಯ ಎರಡನೇ ಹಂತಕ್ಕೆ ಪ್ರಸ್ತಾಪಿಸಲಾಗಿದೆ.

<>><><*><><<>

ಜಾಗತಿಕ ಅನಿಶ್ಚಿತತೆಯ ಈ ಸಂದರ್ಭದಲ್ಲಿ ಸಹಕಾರವು ಹಂಚಿಕೆಯ ಸಮೃದ್ಧಿ ಮತ್ತು ಸುಸ್ಥಿರ ಭವಿಷ್ಯದ ಮಾರ್ಗವನ್ನು ವ್ಯಾಖ್ಯಾನಿಸುತ್ತದೆ ಎಂದು ಭಾರತ ಮತ್ತು ಸ್ವೀಡನ್ ಒತ್ತಿ ಹೇಳಿವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಸ್ವೀಡನ್ ಸಹವರ್ತಿ ಉಲ್ಫ್ ಕ್ರಿಸ್ಟರ್ಸನ್ ಅವರು ಬರೆದ ಲೇಖನದಲ್ಲಿ, ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಅನಿಶ್ಚಿತತೆ, ಇಂಧನ ಅಭದ್ರತೆ ಮತ್ತು ಆರ್ಥಿಕ ವಿಘಟನೆಯ ಸಮಯದಲ್ಲಿ, ಜಗತ್ತು ಸಂಕುಚಿತ ರಾಷ್ಟ್ರೀಯ ವಿಧಾನಗಳಿಗೆ ಹಿಮ್ಮೆಟ್ಟುವ ಅಥವಾ ಸಹಭಾಗಿತ್ವವನ್ನು ಬಲಪಡಿಸುವ ನಿರ್ಣಾಯಕ ಆಯ್ಕೆಯನ್ನು ಎದುರಿಸುತ್ತಿದೆ ಎಂದು ಬಿಂಬಿಸಲಾಗಿದೆ.

<>><><*><><<>

ಹೂಡಿಕೆಗಳ ಮೌಲ್ಯದಲ್ಲಿ ಉಂಟಾಗುವ ಕುಸಿತದ ವಿರುದ್ಧ ರಕ್ಷಣೆ ನೀಡಲು ಹೆಚ್ಚುವರಿ ಬಫರ್ ಆಗಿ ಸೃಷ್ಟಿಸಲಾಗಿದ್ದ 'ಹೂಡಿಕೆ ಏರಿಳಿತ ಮೀಸಲು' ಅನ್ನು ನಿರ್ವಹಿಸುವ ಅಗತ್ಯತೆಯಿಂದ ವಾಣಿಜ್ಯ ಬ್ಯಾಂಕುಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್-ಆರ್‌ಬಿಐ ವಿನಾಯಿತಿ ನೀಡಿದೆ. ಐಎಫ್‌ಆರ್ ನಿರ್ವಹಿಸುವ ಅಗತ್ಯತೆಯನ್ನು ನಿನ್ನೆಯಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ ಎಂದು ಆರ್‌ಬಿಐ ತಿಳಿಸಿದೆ. ಭಾರತದಲ್ಲಿ ಶಾಖೆಯ ರೂಪದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದೇಶಿ ಬ್ಯಾಂಕುಗಳಿಗಾಗಿ, ಐಎಫ್‌ಆರ್‌ನಲ್ಲಿರುವ ಬಾಕಿ ಮೊತ್ತವನ್ನು ಭಾರತೀಯ ಪುಸ್ತಕಗಳಲ್ಲಿ ನಿರ್ವಹಿಸಲಾಗುವ ಶಾಸನಬದ್ಧ ಮೀಸಲು ನಿಧಿಗೆ ಅಥವಾ ಭಾರತೀಯ ಪುಸ್ತಕಗಳಲ್ಲಿ ಉಳಿಸಿಕೊಂಡಿರುವ ರವಾನೆ ಮಾಡಬಹುದಾದ ಮಿಗತೆಯ ನೇರವಾಗಿ ವರ್ಗಾಯಿಸಲಾಗುವುದು ಎಂದು ಆರ್‌ಬಿಐ ತಿಳಿಸಿದೆ.

<>><><*><><<>

ಚೆನ್ನೈ ಉಪನಗರ ರೈಲು ಜಾಲವನ್ನು ಉತ್ತೇಜಿಸಲು ಅರಕೋಣಂ-ಚೆಂಗಲ್ಪಟ್ಟು ಡಬ್ಲಿಂಗ್ ಯೋಜನೆಗೆ ಭಾರತೀಯ ರೈಲ್ವೆ ೯೯೩ ಕೋಟಿ ರೂಪಾಯಿಗಳನ್ನು ಅನುಮೋದಿಸಿದೆ. ಚೆನ್ನೈ ಬೀಚ್, ತಾಂಬರಂ, ಚೆಂಗಲ್ಪಟ್ಟು ಮತ್ತು ಅರಕೋಣಂ ಅನ್ನು ಸಂಪರ್ಕಿಸುವ ಪ್ರಮುಖ ಚೆನ್ನೈ ಉಪನಗರ ವೃತ್ತಾಕಾರದ ರೈಲು ಜಾಲದ ಒಂದು ಭಾಗವಾಗಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿ, ಈ ಯೋಜನೆಯು ಕಾರ್ಯನಿರತ ಚೆನ್ನೈ ಉಪನಗರ ರೈಲು ಜಾಲದ ದಟ್ಟಣೆಯನ್ನು ಕಡಿಮೆ ಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಹಾಗೂ ಸಮಯಪಾಲನೆ ಮತ್ತು ಕಾರ್ಯಾಚರಣೆಯ ದಕ್ಷತೆಯನ್ನು ಸುಧಾರಿಸುತ್ತದೆ ಎಂದು ಹೇಳಿದ್ದಾರೆ.

<>><><*><><<>

ಇರಾನ್ ಮೇಲಿನ ಮಿಲಿಟರಿ ದಾಳಿಯನ್ನು ಅಮೆರಿಕ ತಾತ್ಕಾಲಿಕವಾಗಿ ತಡೆಹಿಡಿದಿರುವ ಹಿನ್ನೆಲೆಯಲ್ಲಿ ಷೇರು ಮಾರುಕಟ್ಟೆಯ ಆರಂಭಿಕ ವಹಿವಾಟಿನಲ್ಲಿ ಉತ್ತಮ ಬೆಳವಣಿಗೆ ಕಂಡು ಬಂದಿದೆ. ಮುಂಬೈಷೇರು ಮಾರಕಟ್ಟೆಯಲ್ಲಿಂದು ಆರಂಭಿಕ ವಹಿವಾಟಿನಲ್ಲಿ ೩೮೮ ಅಂಕಗಳ ಏರಿಕೆಯೊಂದಿಗೆ ೭೫ ಸಾವಿರದ ೭೦೮ರಲ್ಲಿ ವಹಿವಾಟು ಆರಂಭಿಸಿದೆ. ಹಾಗೆ ರಾಷ್ಟ್ರೀಯ ಸಂವೇದಿ ಸೂಚ್ಯಂಕ ನಿಫ್ಟಿ ಸಹ ೧೦೭ ಅಂಕಗಳು ಜಿಗಿತದೊಂದಿಗೆ ೨೩ ಸಾವಿರದ ೭೮೦ ಅಂಕಗಳೊಂದಿಗೆ ವಹಿವಾಟು ನಡೆಸಿದೆ.

<>><><*><><<>

ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ವಿರುದ್ಧದ ಆರೋಪಗಳ ತನಿಖೆ ನಡೆಸುತ್ತಿರುವ ನ್ಯಾಯಾಧೀಶರ ತನಿಖಾ ಸಮಿತಿ ತನ್ನ ವರದಿಯನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಸಂಸತ್ ಭವನದಲ್ಲಿ ಸಲ್ಲಿಸಿದೆ. ನ್ಯಾಯಾಧೀಶರ (ವಿಚಾರಣೆ) ಕಾಯ್ದೆ, ೧೯೬೮ ರ ಅಡಿಯಲ್ಲಿ ಶಾಸನಬದ್ಧ ಅವಶ್ಯಕತೆಗಳಿಗೆ ಅನುಗುಣವಾಗಿ ಇದನ್ನು ಪ್ರಸ್ತುತಪಡಿಸಲಾಯಿತು. ಈ ವರದಿಯನ್ನು ಸಂಸತ್ತಿನ ಉಭಯ ಸದನಗಳಲ್ಲಿ ಸೂಕ್ತ ಸಮಯದಲ್ಲಿ ಮಂಡಿಸಲಾಗುತ್ತದೆ. ಕಳೆದ ವರ್ಷ ಆಗಸ್ಟ್ ೧೨ ರಂದು ಲೋಕಸಭಾ ಸ್ಪೀಕರ್ ಅವರು ಈ ಸಮಿತಿಯನ್ನು ರಚಿಸಿದ್ದರು. ನ್ಯಾಯಾಧೀಶರ ತನಿಖಾ ಸಮಿತಿಯ ಅಧ್ಯಕ್ಷ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್, ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಶ್ರೀ ಚಂದ್ರಶೇಖರ್ ಮತ್ತು ಕರ್ನಾಟಕ ಹೈಕೋರ್ಟ್ ನ ಹಿರಿಯ ವಕೀಲ ಬಿ.ವಿ.ಆಚಾರ್ಯ ಅವರು ನ್ಯಾಯಾಧೀಶರ ತನಿಖಾ ಸಮಿತಿಯ ವರದಿಯನ್ನುಓಂ ಬಿರ್ಲಾ ಅವರಿಗೆ ಸಲ್ಲಿಸಿದರು.

**<>><><*><><<>**

ಜೈಪುರದಲ್ಲಿ ಇಂದು ನಡೆಯಲಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಹಾಗೂ ಲಕ್ನೋ ಸೂಪರ್ ಜೈಂಟ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯವು ಸಂಜೆ ೭:೩೦ ಕ್ಕೆ ಆರಂಭವಾಗಲಿದೆ. ಚೆನ್ನೈನ ಎಂ.ಎ.ಚಿದಂಬರಮ್ ಕ್ರೀಡಾಂಗಣದಲ್ಲಿ ನಿನ್ನೆ ರಾತ್ರಿ ನಡೆದ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ, ಸನ್‌ರೈಸರ್ಸ್ ಹೈದರಾಬಾದ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಐದು ವಿಕೆಟ್‌ಗಳ ಜಯ ಸಾಧಿಸಿತು.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>**